**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 968 /2021

**ಚಾಸಾ ಃ- 07 / ಪ್ರಾಸಾ ಃ- 03**

| | |
|---|---|
| ಹೆಸರು | ಪಾಪಣ್ಣ |
| ತಂದೆ ಹೆಸರು | ಪುಟ್ಟರಂಗಯ್ಯ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಿಳಾಸ | ಬಸವನಪಾಳ್ಯ |

**ದಿನಾಂಕಃ 07-12-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರಿಂದ 6 ಮತ್ತು 8 ರವರು ಪರಿಚಯ ಇರುತ್ತಾರೆ. ಆರೋಪಿಗಳು ಪರಿಚಯ ಇರುತ್ತಾರೆ. 3 ವರ್ಷದ ಹಿಂದೆ ಮಾಹಿತಿ ಎಂ ಎಲ್ ಎ ಮಂಜುನಾಥ್ ? ಎಂಬುವವರು ಗುದ್ದಲಿಪೂಜೆಗಾಗಿ ಬಸವನಪಾಳ್ಯಕ್ಕೆ ಬಂದಿದ್ದರು. ಆ ಸಮಯದಲ್ಲಿ ಈಗ ನ್ಯಾಯಾಲಯದಲ್ಲಿ ಇರುವ ಆರೋಪಿಗಳು ಗುಂಪು ಕಟ್ಟಿಕೊಂಡು ಗಲಾಟೆ ಮಾಡಿರುತ್ತಾರೆ. ನಂತರ ಪೋಲಿಸರು ಬಂದು ಗಲಾಟೆ ನಿಲ್ಲಿಸಿರುತ್ತಾರೆ ನಂತರ ಎಂಎಲ್ ಎ ರವರು ಹೋಗಿರುತ್ತಾರೆ ಹಾಗೂ ನಾನೂ ಹೋಗಿರುತ್ತೇನೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಆ ದಿನ ದಿನಾಂಕ 04.05.2020 ಆಗಿತ್ತು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಬಿ.ಕೆ.ಕುಮಾರ್ ರವರು ಶಾಶಕರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಗಳು ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸಾಕ್ಷಿ ಕುಮಾರ್ ರವರು ಅಡ್ಡಿ ಪಡಿಸಿರುವುದಿಲ್ಲ, ಅವರ ಸಹಚರರು ಅಡ್ಡಿ ಪಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಅವರೂ ಸಹ ಗುಂಪು ಕಟ್ಟಿಕೊಂಡು ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಆರ್ ಎಸ್?**ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆ ದಿನ ಎಷ್ಟು ಜನರು ಇದ್ದರು ಎಂದು ಹೇಳಲು ಬರುವುದಿಲ್ಲವೆಂದರೆ ಸಾಕ್ಷಿ ಸುಮಾರು 60 ಜನ ಇದ್ದರು ಆದರೆ ಅವರುಗಳ ಹೆಸರು ಹೇಳಲು ಬರುವುದಿಲ್ಲವೆಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್‌ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 968 /2021**

**ಚಾಸಾ :- 06 / ಪ್ರಾಸಾ :- 02**

| | |
|---|---|
| ಹೆಸರು | ಚಿಕ್ಕಣ್ಣ |
| ತಂದೆ ಹೆಸರು | ಗಿರಿಯಪ್ಪ |
| ವಯಸ್ಸು | 41 ವರ್ಷ |
| ಉದ್ಯೋಗ | ಸಿವಿಲ್ ಕಂಕ್ಟ್ರಾಕ್ಟರ್ |
| ವಿಳಾಸ | ಹನುಮಾಪುರ |

**ದಿನಾಂಕಃ 07-12-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರಿಂದ 5 ಹಾಗೂ 7 ಮತ್ತು 8 ರವರು ಪರಿಚಯ ಇರುವುದಿಲ್ಲ ಆರೋಪಿಗಳು ಪರಿಚಯ ಇರುವುದಿಲ್ಲ. ಈಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 04.05.2020 ರಂದು ಮಾಗಡಿ ಕ್ಷೇತ್ರದ ಶಾಶಕರಾದ ಎ. ಮಂಜುನಾಥ್ ರವರು ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ ಅಡಿ ಹಾರೋಹಳ್ಳಿ ಗ್ರಾಮದಿಂದ ಬಸವನಪಾಳ್ಯ ಗ್ರಾಮದ ಮುಖಾಂತರ ಶ್ರೀಪತಿಹಳ್ಳಿ ಕಲ್ಯಾ ರಸ್ತೆ ವರೆಗೆ ರಸ್ತೆ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಬಸವನಪಾಳ್ಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ಮುಖಂಡರಾದ ಪೂಜಾರಿ ಪಾಳ್ಯ ಕೃಷ್ಣಮೂರ್ತಿ , ಬಾಳೇನಹಳ್ಳಿ ರಾಜಶೇಖರ್, ಶ್ರೀಪತಿಹಳ್ಳಿ ಕೃಷ್ಣಪ್ಪ , ಹನುಮಾಪುರದ ಚಿಕ್ಕಣ್ಣ , ಕಲ್ಕೆರೆ ಉಮೇಶ , ಬಸವನಪಾಳ್ಯದ ಪಾಪಣ್ಣ , ಎಂಎ ಎಲ್ ಸಿ ಪಿ ಎ ವೆಂಕಟೇಶ್ ಮತ್ತು ಇತರ ಮುಖಂಡರು ಹೋಗಿದ್ದೆವು ಎಂದರೆ ಸರಿಯಲ್ಲ. ಮಧ್ಯಾಹ್ನ 12.30 ಗಂಟೆಯಲ್ಲಿ ಶಾಶಕರಾದ ಎ.ಮಂಜುನಾಥ್ ರವರು ರಸ್ತೆ ಕಾಮಗಾರಿಗೆ ಬಸವನಪಾಳ್ಯದಲ್ಲಿ ಗುದ್ದಲಿ ಪೂಜೆ ಮಾಡಲು ಮುಂದಾದಾಗ ಬಸವನಪಾಳ್ಯ ಗ್ರಾಮದ ಬಿ ಕೆ ಕುಮಾರ್ ಬಿನ್ ಕೆಂಪಯ್ಯ , ರವಿಕುಮಾರ್ ಬಿನ್ ಕುಮಾರ್ , ಮನು ಬಿನ್ ನಾಗರಾಜು, ನರಸಿಂಹಮೂರ್ತಿ ಬಿನ್ ನಾಗರಾಜು, ಸಾತನೂರು ಗ್ರಾಮದ ಶ್ರೀಧರ್ ಬಿನ್ ಗೋವಿಂದಪ್ಪ , ವೇಣು ಬಿನ್ ಕುಮಾರ್ ಎಂಬುವವರು ಗುಂಪು ಕಟ್ಟಿಕೊಂಡು ಬಂದು ಬಿ.ಕೆ.ಕುಮಾರ್ ರವರು ಶಾಶಕರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು ಸರ್ಕಾರಿ ಕಾರ್ಯಕ್ರಮವಾದ ರಸ್ತೆ ಗುದ್ದಲಿ ಪೂಜೆ ಹಾಗೂ ಶಾಶಕರ ಸರ್ಕಾರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆ ವೇಳೆ ನೂಕು ನುಗ್ಗಲು ಉಂಟಾಯಿತು ಎಂದರೆ ಸರಿಯಲ್ಲ. ಶಾಶಕರ ಗನ್ ಮ್ಯಾನ್ ಮತ್ತು ನಾವುಗಳು ಸಮಾಧಾನ ಮಾಡಿದೆವು ಎಂದರೆ ಸರಿಯಲ್ಲ. ಬಿ.ಕೆ. ಕುಮಾರ್ ಈ ಕಾಮಗಾರಿ ಮಾಡಲು ಬಿಡುವುದಿಲ್ಲ ಅದೇಗೆ ರಸ್ತೆ ಮಾಡುತ್ತೀರೋ ನೋಡುತ್ತೇನೆ ಎಂದು ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನ ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್?** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 968 /2021**

**ಚಾಸಾ :- 04 / ಪ್ರಾಸಾ :- 01**

| | |
|---|---|
| ಹೆಸರು | ಕೃಷ್ಣಮೂರ್ತಿ |
| ತಂದೆ ಹೆಸರು | ಕೆಂಪಗೂಳಯ್ಯ |
| ವಯಸ್ಸು | 54 ವರ್ಷ |
| ಉದ್ಯೋಗ | ವ್ಯಾಪಾರ |
| ವಿಳಾಸ | ನಾಗರಭಾವಿ , ಬೆಂಗಳೂರು |

**ದಿನಾಂಕ: 07-12-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಚಾಸಾ-1 ರವರು ಮಾತ್ರ ಗೊತ್ತು, ಚಾಸಾ- 2, 3 ಹಾಗೂ 5 ರಿಂದ 8 ರವರು ಅಷ್ಟು ಪರಿಚಯ ಇರುವುದಿಲ್ಲ, ಆರೋಪಿಗಳು ಪರಿಚಯ ಇರುವುದಿಲ್ಲ. ಈಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ದಿನಾಂಕ 04.05.2020 ರಂದು ಮಾಗಡಿ ಕ್ಷೇತ್ರದ ಶಾಶಕರಾದ ಎ. ಮಂಜುನಾಥ್

ರವರು ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ ಅಡಿ ಹಾರೋಹಳ್ಳಿ ಗ್ರಾಮದಿಂದ ಬಸವನಪಾಳ್ಯ ಗ್ರಾಮದ ಮುಖಾಂತರ ಶ್ರೀಪತಿಹಳ್ಳಿ ಕಲ್ಯಾ ರಸ್ತೆ ವರೆಗೆ ರಸ್ತೆ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಬಸವನಪಾಳ್ಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ ಮುಖಂಡರಾದ ಶ್ರೀಪತಿಹಳ್ಳಿ ಕೃಷ್ಣಪ್ಪ , ಬಾಳೇನಹಳ್ಳಿ ರಾಜಶೇಖರ್ ಹನುಮಾಪುರದ ಚಿಕ್ಕಣ್ಣ , ಕಲ್ಕೆರೆ ಉಮೇಶ , ಬಸವನಪಾಳ್ಯದ ಪಾಪಣ್ಣ , ಎಂಎ ಎಲ್ ಸಿ ಪಿ ಎ ವೆಂಕಟೇಶ್ ಮತ್ತು ಇತರ ಮುಖಂಡರು ಹೋಗಿದ್ದೆವು ಎಂದರೆ ಸರಿಯಲ್ಲ. ಮಧ್ಯಾಹ್ನ 12.30 ಗಂಟೆಯಲ್ಲಿ ಶಾಶಕರಾದ ಎ.ಮಂಜುನಾಥ್ ರವರು ರಸ್ತೆ ಕಾಮಗಾರಿಗೆ ಬಸವನಪಾಳ್ಯದಲ್ಲಿ ಗುದ್ದಲಿ ಪೂಜೆ ಮಾಡಲು ಮುಂದಾದಾಗ ಬಸವನಪಾಳ್ಯ ಗ್ರಾಮದ ಬಿ ಕೆ ಕುಮಾರ್ ಬಿನ್ ಕೆಂಪಯ್ಯ , ರವಿಕುಮಾರ್ ಬಿನ್ ಕುಮಾರ್ , ಮನು ಬಿನ್ ನಾಗರಾಜು, ನರಸಿಂಹಮೂರ್ತಿ ಬಿನ್ ನಾಗರಾಜು, ಸಾತನೂರು ಗ್ರಾಮದ ಶ್ರೀಧರ್ ಬಿನ್ ಗೋವಿಂದಪ್ಪ , ವೇಣು ಬಿನ್ ಕುಮಾರ್ ಎಂಬುವವರು ಗುಪು ಕಟ್ಟಿಕೊಂಡು ಬಂದು ಬಿ.ಕೆ.ಕುಮಾರ್ ರವರು ಶಾಶಕರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು ಸರ್ಕಾರಿ ಕಾರ್ಯಕ್ರಮವಾದ ರಸ್ತೆ ಗುದ್ದಲಿ ಪೂಜೆ ಹಾಗೂ ಶಾಶಕರ ಸರ್ಕಾರ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆ ವೇಳೆ ನೂಕು ನುಗ್ಗಲು ಉಂಟಾಯಿತು ಎಂದರೆ ಸರಿಯಲ್ಲ. ಶಾಶಕರ ಗನ್ ಮ್ಯಾನ್ ಮತ್ತು ನಾವುಗಳು ಸಮಾಧಾನ ಮಾಡಿದೆವು ಎಂದರೆ ಸರಿಯಲ್ಲ. ಬಿ.ಕೆ. ಕುಮಾರ್ ಈ ಕಾಮಗಾರಿ ಮಾಡಲು ಬಿಡುವುದಿಲ್ಲ ಅದೇಗೆ ರಸ್ತೆ ಮಾಡುತ್ತೀರೋ ನೋಡುತ್ತೇನೆ ಎಂದು ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನ ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್?**ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**